# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 921
ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 21.09.2022
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಚಾಂತಾರು ಗ್ರಾಮ ಪಂಚಾಯತ್‌ಗೆ ಕಾಡು ಬೆಳೆಸಲು ಸರ್ವೆ ನಂಬರ್ 34/1ಎ/1ಬಿ ಯಲ್ಲಿ 2.40 ಎಕರೆ ಸ್ಥಳದ ಹಕ್ಕನ್ನು ಮಂಜೂರು ಮಾಡಿದ್ದು ನಿಜವೇ; ನಿಜವಾಗಿದ್ದಲ್ಲಿ, ಚಾಂತಾರು ಗ್ರಾಮ ಪಂಚಾಯತ್‌ನಿಂದ ಮನವಿ ಬಂದ ದಿನಾಂಕ ಮತ್ತು ಕಂದಾಯ ಇಲಾಖೆ ಮಂಜೂರು ಮಾಡಿದ ದಿನಾಂಕವನ್ನು ತಿಳಿಸುವುದು; (ಬೇಡಿಕೆಯ ಮನವಿ ಮತ್ತು ಮಂಜೂರಾತಿ ಆದೇಶದ ಪ್ರತಿ ಒದಗಿಸುವುದು) | ಉಡುಪಿ ಜಿಲ್ಲೆ ಬ್ರಹ್ಮಾವರ ತಾಲ್ಲೂಕು ಚಾಂತಾರು ಗ್ರಾಮ ಪಂಚಾಯತ್‌ಗೆ ಕಾಡು ಬೆಳೆಸಲು ಸರ್ವೆ ನಂ.34/1ಎ/1ಬಿ ರಲ್ಲಿ ಯಾವುದೇ ಜಮೀನು ಮಂಜೂರು ಮಾಡಿರುವುದಿಲ್ಲ. ಆದರೆ ಪಹಣಿ ಕಾಲಂ 11 ರಲ್ಲಿ "ಚಾಂತಾರು ಗ್ರಾಮ ಪಂಚಾಯತ್ ಕಾಡು" ಎಂದು ದಾಖಲಾಗಿದ್ದು, ಸದರಿ ದಾಖಲಾತಿಯು ಫೈಸಲ್ ಪತ್ರಿಕೆ 1967-68ನೇ ಸಾಲಿನ ಕೈಬರಹದ ಪಹಣಿಯಂತೆ ದಾಖಲಾಗಿರುತ್ತದೆ. |
| (ಆ) | ಚಾಂತಾರು ಗ್ರಾಮ ಪಂಚಾಯತ್‌ಗೆ ಕಾಡು ಬೆಳೆಸಲು ಮಂಜೂರಾತಿ ಆದ ಸ್ಥಳವು ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರ ಬ್ರಹ್ಮಾವರದ ಸುಪರ್ದಿಯಲ್ಲಿರುವ ತೆಂಗು ಮತ್ತು ಗೇರು ಮರಗಳಿರುವ ಸ್ಥಳವಾಗಿರುವುದೆಂದು ಕಂದಾಯ ಇಲಾಖೆಯ ಗಮನಕ್ಕೆ ಬಂದಿಲ್ಲವೇ; ಯಾವ ದುರುದ್ದೇಶದಿಂದ ಈ ಮಂಜೂರಾತಿ ನೀಡಲಾಗಿದೆ; | ಚಾಂತಾರು ಗ್ರಾಮ ಸರ್ವೆ ನಂ.34/1ಎ/1ಬಿ ರಲ್ಲಿ 2.40 ಎಕರೆ ಜಮೀನಿನಲ್ಲಿ ಸುಮಾರು 44 ತೆಂಗಿನ ಮರಗಳಿರುತ್ತವೆ ಹಾಗೂ ಇತರೆ ಗಿಡಗಳು ಹಸಿರು ಮೇವಿನ ಹುಲ್ಲು ಬೆಳೆದಿರುತ್ತದೆ. ಇದಲ್ಲದೇ ತೋಟಗಾರಿಕೆ ಬೆಳೆಯಾದ ಹಣ್ಣಿನ ಗಿಡಗಳಿದ್ದು, ಸ್ವಲ್ಪ ಕಾಟು ಮರಗಳಿರುತ್ತದೆ. ಸದರಿ ಜಮೀನಿನ ಸುತ್ತಲೂ ಕೃಷಿ ಮತ್ತು ಸಂಶೋಧನಾ ಕೇಂದ್ರದ ತಂತಿ ಬೇಲಿ ಇರುತ್ತದೆ. ಸದರಿ ಜಮೀನನ್ನು ಕಂದಾಯ ಇಲಾಖೆಯಿಂದ ಚಾಂತಾರು ಗ್ರಾಮ ಪಂಚಾಯತ್‌ಗೆ ಯಾವುದೇ ಉದ್ದೇಶಕ್ಕೆ ಮಂಜೂರು ಮಾಡಿರುವುದಿಲ್ಲ. |
| (ಇ) | ಚಾಂತಾರು ಗ್ರಾಮಪಂಚಾಯತ್ ಸರ್ವೆ ನಂಬರ್ 34/1ಎ/1ಬಿ ಯಲ್ಲಿ 2.40 ಎಕರೆಗೆ ಬದಲಿ ಆಗಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಸರ್ವೆ ನಂಬರ್ 106 ಲ್ಲಿ 11.00 ಎಕರೆ ಘನತ್ಯಾಜ್ಯ ವಿಲೇವಾರಿ ಸ್ಥಳಕ್ಕಾಗಿ ತಹಶೀಲ್ದಾರ್ ತಹಶೀಲ್ದಾರರು 30.08.2022 ರಂದು ಸಭೆ ನಡೆಸಿ, ತೀರ್ಮಾನಿಸಿರುವುದರಿಂದ ಈ ಬಗ್ಗೆ ತೀವ್ರ ವಿರೋಧವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬ್ರಹ್ಮಾವರ ತಾಲ್ಲೂಕು, ಹೇರೂರು ಗ್ರಾಮದ ಸರ್ವೆ ನಂ.106 ರ 11.00 ಎಕರೆ ಜಮೀನು ಘನ ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣ ಉದ್ದೇಶಕ್ಕಾಗಿ ಗ್ರಾಮ ಪಂಚಾಯಿತಿಗೆ ಕಾಯ್ದಿರಿಸುವ ಬಗ್ಗೆ, ತಹಶೀಲ್ದಾರ, ಬ್ರಹ್ಮಾವರ ತಾಲ್ಲೂಕು ಇವರು ದಿನಾಂಕ:30.08.2022 ರಂದು ನಡೆಸಿದ ಸಭೆಯಲ್ಲಿ ಗ್ರಾಮಸ್ಥರಿಂದ ಆಕ್ಷೇಪಣೆಗಳು ಬಂದಿರುವುದರಿಂದ ಘನ ತ್ಯಾಜ್ಯ ನಿರ್ವಹಣಾ ಘಟಕ ವಿಲೇವಾರಿಗೆ ಕಾಯ್ದಿರಿಸುವ ಬಗ್ಗೆ ಯಾವುದೇ ಕ್ರಮಕೈಗೊಂಡಿರುವುದಿಲ್ಲ. |

(ಕಡತ ಸಂಖ್ಯೆ:ಕಂಇ 96 ಎಲ್‌ಜಿಎ 2022)

**(ಆರ್.ಅಶೋಕ)**
ಕಂದಾಯ ಸಚಿವರು